**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕಿಶೋರ್ ಕುಮಾರ್ ಪುತ್ತೂರು ರವರು ನಿಯಮ 72ರ ಗಮನ ಸೆಳೆಯುವ ಸೂಚನೆಗೆ ಉತ್ತರ ಸಲ್ಲಿಸುವ ಬಗ್ಗೆ.**

## ವಿಷಯ

ರಾಜ್ಯದ ಗ್ರಾಮ ಪಂಚಾತಿಗಳಲ್ಲಿ ಮತ್ತು ತಾಲ್ಲೂಕು ಪಂಚಾಯತ್‌ಗಳಲ್ಲಿ ಹಲವಾರು ವರ್ಷಗಳಿಂದ ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪುನರ್ ವಸತಿ ಕಾರ್ಯಕರ್ತ ಮತ್ತು ವಿವಿದ್ದೊದ್ದೇಶ ಪುನರ್ ವಸತಿ ಕಾರ್ಯಕರ್ತರು ಕೇಂದ್ರ ಮತ್ತು ರಾಜ್ಯ ಸರ್ಕಾರದ ಹಲವಾರು ಯೋಜನೆಗಳನ್ನು ಅನುಷ್ಠಾನಗೊಳಿಸಲು ಶ್ರಮವಹಿಸುತ್ತಿದ್ದು ಮತ್ತು ಗ್ರಾಮೀಣ ಭಾಗದಲ್ಲಿರುವ ಎಲ್ಲಾ ವಿಕಲಚೇತನರ ಸಮಸ್ಯೆಗಳನ್ನು ನಿವಾರಿಸಲು ತನ್ನ ಕಾರ್ಯ ವ್ಯಾಪ್ತಿಯಲಿ ಪ್ರಯತ್ನಿಸುತ್ತಿದ್ದಾರೆ. ಆದರೆ ಸದರಿ ನೌಕರರಿಗೆ ಸರ್ಕಾರವು ತಿಂಗಳಿಗೆ ಕೇವಲ (ಗ್ರಾಮೀಣ ಪುನರ್ ವಸತಿ ಕಾರ್ಯಕರ್ತರಿಗೆ ರೂಪಾಯಿ 10,000/- ಮತ್ತು ವಿವಿದೋದ್ದೇಶ ಪುನರ್ ವಸತಿ ಕಾರ್ಯಕರ್ತರಿಗೆ ರೂಪಾಯಿ 15,000/-) ವೇತನವನ್ನು ಪಾವತಿಸುತ್ತಿದ್ದು ಸದರಿ ವೇತನದಲ್ಲಿ ಸದರಿ ನೌಕರರ ಜೀವನ ನಿರ್ವಹಣೆ ತುಂಬಾ ಕಷ್ಟಕರವಾಗಿದ್ದು, ಅವರಿಗೆ ಪ್ರತಿ ತಿಂಗಳು ಕಾರ್ಮಿಕ ಇಲಾಖೆಯ ಕನಿಷ್ಠ ವೇತನ ಪಾವತಿಸಲು ಕ್ರಮವಹಿಸಬೇಕಾಗಿ ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಸಚಿವರ ಗಮನ ಸೆಳೆಯಬಯಸುತ್ತೇನೆ.

## ಉತ್ತರ

ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ಗ್ರಾಮೀಣ ಪುನರ್ವಸತಿ ಯೋಜನೆಯಡಿ ಗೌರವಧನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) / ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) / ನಗರ ಪುನರ್ವಸತಿ ಕಾರ್ಯಕರ್ತರ (URW) ಗೌರವಧನವನ್ನು ಈ ಕೆಳಕಂಡ ವಿವರಗಳಂತೆ ಪಾವತಿಸಲಾಗುತ್ತಿರುತ್ತದೆ.

| ಕ್ರ. ಸಂ | ಪುನರ್ವಸತಿ ಕಾರ್ಯಕರ್ತರ ವಿವರ | ಕಾರ್ಯ ನಿರ್ವಹಿಸುತ್ತಿರುವ ಸ್ಥಳ | ಮಂಜೂರಾದ ಪುನರ್ವಸತಿ ಕಾರ್ಯ ಕರ್ತರ ಸಂಖ್ಯೆ | ಸರ್ಕಾರದ ಆದೇಶ ಸಂಖ್ಯೆ: ಮಮಇ/78/ಪಿಹೆಚ್ ಪಿ/2022, ದಿನಾಂಕ:14-09-2022ರಂತೆ ಪಾವತಿಸುತ್ತಿದ್ದ ಮಾಸಿಕ ಗೌರವಧನ | ಸರ್ಕಾರದ ಆದೇಶ ಸಂಖ್ಯೆ: ಮಮಇ/41/ಪಿಹೆಚ್‌ಪಿ/2025, ದಿನಾಂಕ:03-06-2025ರಂತೆ ಹಾಲಿ ಪಾವತಿಸುತ್ತಿರುವ ಗೌರವಧನ |
|---|---|---|---|---|---|
| 1 | **ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW)** | ತಾಲ್ಲೂಕು ಪಂಚಾಯಿತಿಗಳಲ್ಲಿ | 176 | ರೂ.15000/- | ರೂ.16000/- |
| 2 | **ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW)** | ಗ್ರಾಮ ಪಂಚಾಯಿತಿಗಳಲ್ಲಿ | 6022 | ರೂ.9000/- | ರೂ.10000/- |
| 3 | **ನಗರ ಪುನರ್ವಸತಿ ಕಾರ್ಯಕರ್ತರು (URW)** | ನಗರ ಸ್ಥಳೀಯ ಸಂಸ್ಥೆಗಳಲ್ಲಿ | 613 | ರೂ.9000/- | ರೂ.10000/- |

ಆದರೆ, ಗ್ರಾಮೀಣ ಪುನರ್ವಸತಿ ಕಾರ್ಯಕರ್ತರು (VRW) / ವಿವಿಧೋದ್ದೇಶ ಪುನರ್ವಸತಿ ಕಾರ್ಯಕರ್ತರು (MRW) / ನಗರ ಪುನರ್ವಸತಿ ಕಾರ್ಯಕರ್ತರ (URW) ಇವರುಗಳ ಹಿತದೃಷ್ಟಿಯಿಂದ ಗೌರವಧನವನ್ನು ಕನಿಷ್ಠ ವೇತನ ಕಾಯ್ದೆಯಡಿ ತರುವ ಬಗ್ಗೆ, ಕಾರ್ಮಿಕ ಇಲಾಖೆಯ ಅಭಿಪ್ರಾಯ ಪಡೆದು ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ:ಮಮಇ 74 ಪಿಹೆಚ್ ಪಿ2026**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು.